ಘೋಷಿಸಬೇಕಾಗುವುದು. ಅಧಿಸೂಚನೆ ಹೊರಡಿಸಲು ಪ್ರಸ್ತಾವ ಪರಿಶೀಲನೆಯಲ್ಲಿದ್ದು, ಅಧಿಸೂಚನೆ ಕೊರಡಿಸಿದ ನಂತರ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರಿಸಲು ಕ್ರಮ ಜರುಗಿಸಲಾಗುವುದು.

ಉ) ಮಾರುಕಟ್ಟೆ ಸಮಿತಿಯಿಂದ ಸಂತೆ ಮೈದಾನವನ್ನು ಅಭಿವೃದ್ಧಿಪಡಿಸಿ ಅದರಲ್ಲಿ ಬರುವ ಆದಾಯವನ್ನು ಪಂಚಾಯತಿಗೆ ನೀಡುವ ಷರತ್ತಿನ ಮೇಲೆ ಸಂತೆ ಮೈದಾನದ 3.20 ಎಕರೆ ಜಮೀನನ್ನು ಮಾರುಕಟ್ಟೆ, ಸಮಿತಿಯ ವಶಕ್ಕೆ ನೀಡಲು ಬೇಗೂರು ಪಂಚಾಯಿತಿಯು ತೀರ್ಮಾನಿಸಿದೆ. ಈ ಜಮೀನು ಕೆರೆ ಅಂಗಳವೆಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿರುವುದರಿಂದ ಸಂತೆಮೈದಾನ ವ್ಯಾಪ್ತಿಯಲ್ಲಿನ ಸರ್ವೆ ನಂ 74 ರಲ್ಲಿನ ಜಮೀನನ್ನು ಸಮಿತಿಯ ವಶಕ್ಕೆ ಪಡೆದು ಸಂತೆ ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ತೆಂಗು ಬೆಲೆ

3024 - ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತೆಂಗು ಬೆಲೆ ಕುಸಿದು ರೈತರು ಎದುರಿಸುತ್ತಿರುವ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿದೆ.

ಆ) 1) ಒಣಕೊಬ್ಬರಿ ಗಿಟುಕಿಗೆ ಬೆಂಬಲ ಬೆಲೆ ನೀಡಲಾಗುವುದು.

2) ಯೋಗ್ಯ ಬೆಲೆ ದೊರಕಿಸಿಸಲು ತೆಂಗಿನ ಉತ್ಪನ್ನಗಳ ಆಮದು ನಿಷೇಧಿಸಲು ಭಾರತ ಸರ್ಕಾರವನ್ನು ಕೋರಲಾಗಿದೆ.

3) ಖಾದ್ಯ ತೈಲಗಳ ಆಮದು ಶುಲ್ಕವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದ್ದು ಆಮದು ಶುಲ್ಕ ಹೆಚ್ಚಿಸಿದಲ್ಲಿ ಖಾದ್ಯ ಎಣ್ಣೆಗಳ ಆಮದು ಪ್ರಮಾಣ ಕಡಿಮೆಯಾಗಿ ತೆಂಗಿನ ಕಾಯಿಯ ಬೆಲೆ ಹೆಚ್ಚುವುದೆಂದು ನಿರೀಕ್ಷಿಸಿದೆ.

ಬಸವಕಲ್ಯಾಣ ಕ್ಷೇತ್ರದಲ್ಲಿ ನಿವೇಶನ ಮನೆಗಳ ಹಂಚಿಕೆ

3025 - ಶ್ರೀ ಎಂ.ಬಿ. ಮುಳೆ (ಬಸವಕಲ್ಯಾಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ವಿವಿಧ ಯೋಜನೆ ಅಡಿಯಲ್ಲಿ ಒದಗಿಸಿದ ನಿವೇಶನಗಳ ಸಂಖ್ಯೆ ಎಷ್ಟು? ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು? ಹಾಗೂ ಇನ್ನೂ ಹಂಚಿಕೆ ಮಾಡಬೇಕಾದ ಮನೆಗಳ ಸಂಖ್ಯೆ ಎಷ್ಟು?*

ಆ) *2000-2001 ನೇ ಸಾಲಿನಲ್ಲಿ ಸರ್ಕಾರ ವಿವಿಧ ಯೋಜನೆಗಳ ಅಡಿಯಲ್ಲಿ ಸದರಿ ಮತ ಕ್ಷೇತ್ರದಲ್ಲಿ ಹಂಚಿಕೆ ಮಾಡಲಿರುವ ನಿವೇಶನ ಮತ್ತು ಮನೆಗಳ ಸಂಖ್ಯೆ ಎಷ್ಟು?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಬಸವ ಕಲ್ಯಾಣ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಿಗೆ 2000-2001 ನೇ ಸಾಲಿನಲ್ಲಿ ಈ ಕೆಳಕಂಡಂತೆ ಮನೆ/ನಿವೇಶನಗಳನ್ನು ಹಂಚಿಕೆ ಮಾಡಿದೆ.

ಆಶ್ರಯ ಯೋಜನೆ

ಮನೆ		ನಿವೇಶನ	
ಪಟ್ಟಣ	106	ಪಟ್ಟಣ	774
ಗ್ರಾಮೀಣ	705	ಗ್ರಾಮೀಣ	109
ಅಂಬೇಡ್ಕರ್ ಯೋಜನೆ			
ಗ್ರಾಮೀಣ	085	-	-
ಇಂದಿರಾ ಆವಾಸ್ ಯೋಜನೆ			
ಗ್ರಾಮೀಣ	303	-	-

ಯೋಜನೆ	1998-99			1999-2000		
	ಗುರಿ	ಸಾಧನೆ	ಬಾಕಿ	ಗುರಿ	ಸಾಧನೆ	ಬಾಕಿ
ಆಶ್ರಯ ನಿವೇಶನ	650	166	484	326	-	-
ಆಶ್ರಯ ಮನೆ	225	209	16	400	-	-
ಅಂಬೇಡ್ಕರ್ ಮನೆ	183	174	09	126	-	-
ಇಂದಿರಾ ಆವಾಜ್ ಮನೆ	414	413	01	320	223	97